**ಹಿರಿಯ ಶ್ರೇಣಿ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ.**
**CC No. 312/2023**

**PW-5 CW-3**

| | | |
|---|---|---|
| ಸಾಕ್ಷಿದಾರನ ಹೆಸರು | : | ಸಂತೋಷ ತಂದೆ ಹಂಪಣ್ಣ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ಬಡಿಗೆತನ |
| ವಾಸಸ್ಥಳ | : | ಸೊಲ್ಲಾಪುರ |
| ಪ್ರಮಾಣಿಕರಿಸಿದ ದಿನಾಂಕ | : | 20-12-2024 |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.**

ಚಾಸಾ-1 ನನ್ನ ತಂಗಿ. ಚಾಸಾ-2 ಮತ್ತು 4 ನನ್ನ ಮಾಮಂದಿರು. ಚಾಸಾ-5 ರಿಂದ 9 ರವರ ಪರಿಚಯ ಇರುತ್ತದೆ. ಆರೋಪಿತರು ಸಂಬಂಧಿಕರಾಗಬೇಕು.

ದಿನಾಂಕ 13-08-2020 ರಂದು ಬೆಳಿಗ್ಗೆ 10-00 ರಿಂದ 11-00 ರ ಅವಧಿಯಲ್ಲಿ ಪೊಲೀಸರು ಚಾಸಾ-4 ಗಂಗಪ್ಪ ಇವರ ಮನೆಯಲ್ಲಿ ಹೊಡೆದಾಟಕ್ಕೆ ಸಂಬಂಧಿಸಿದಂತೆ ಪಂಚನಾಮೆ ಮಾಡಿ ನನ್ನ ಸಹಿಯನ್ನು ಪಡೆದಿರುತ್ತಾರೆ. ಸದರಿ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದು ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದೆ, ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಆರ್.ಕೆ ವಕೀಲರಿಂದ.**

ದಿನಾಂಕ 13-08-2020 ರಂದೇ ಜಗಳ ಆಗಿರುತ್ತದೆ ಎಂದರೆ ಸರಿ. ನಾನು 9-30 ಗಂಟೆಗೆ ಬಾತ್ರೂಮಗೆ ಹೊರಟಿದ್ದೆ. ನಾನು ಮಸೀದಾಪುರ ಗ್ರಾಮಕ್ಕೆ ಬಂದಾಗ ಸದರಿ ದಿನ ಬೆಳಿಗ್ಗೆ 9-30 ಗಂಟೆಗೆ ಬಾತ್ರೂಮಗೆ ಹೊರಟಿದ್ದು ಆಗ ಜಗಳ ಆಗಿರುತ್ತದೆ. ಪಂಚನಾಮೆಯಲ್ಲಿ ಬರೆದ ವಿಷಯಗಳು ನನಗೆ ಗೊತ್ತಿರುತ್ತವೆ. ಪಂಚನಾಮೆಯಲ್ಲಿ ಗಂಡ-ಹೆಂಡತಿ ಜಗಳವಾಡಿದ ಬಗ್ಗೆ ನಮೂದಿಸಿ ನಮ್ಮ ಸಹಿ ಪಡೆದಿರುತ್ತಾರೆ. ಚಾಸಾ-1 ರವರು ನನಗೆ ಸಂಬಂಧದಲ್ಲಿ ತಂಗಿಯಾಗಬೇಕಾಗಿದ್ದರಿಂದ ಅವಳಿಗೆ ಸಹಾಯ ಮಾಡಲು ಪೊಲೀಸರು ದಿನಾಂಕ 13-08-2020 ರಂದು ಬೆಳಿಗ್ಗೆ 10-00 ರಿಂದ 11-00 ರ ಅವಧಿಯಲ್ಲಿ ಗಂಗಪ್ಪನ ಮನೆಯಲ್ಲಿ ಪಂಚನಾಮೆ ಮಾಡಿ ನನ್ನ ಸಹಿ ಪಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.